

## ನಿನ್ನ ಸ್ವಂತ ಫಲವನ್ನು ತಿನ್ನು

ಒಮ್ಮೆ ಶಿಷ್ಯನು "ನೀವು ನಮಗೆ ಕತೆಗಳನ್ನು ಹೇಳುತ್ತೀರಿ. ಆದರೆ ಅವುಗಳ ಅರ್ಥವನ್ನು ನಮಗೆ ಎಂದೂ ತಿಳಿಸುವುದಿಲ್ಲ" ಎಂದು ದೂರಿದನು.

ಗುರುವು "ಯಾರಾದರೂ ಮೊದಲೇ ರುಚಿ ನೋಡಿದ್ದ ಹಣ್ಣನ್ನು ನಿನಗೆ ನೀಡಿದರೆ ನೀನದನ್ನು ಇಷ್ಟ ಪಡುತ್ತೀಯಾ?" ಎಂದನು.

# ಒಂದು ಮಹತ್ವದ ಅಂತರ


ಒಮ್ಮೆ ಸೂಫಿ ಉವ್ವೈಸ್‌ನನ್ನು ಒಬ್ಬನು "ದೈವಕೃಪೆಯಿಂದ ನೀವು ಏನನ್ನು ಗಳಿಸಿರುವಿರಿ?" ಎಂದು ಕೇಳಿದನು.

ಅವನು "ಬೆಳಿಗ್ಗೆ ಎದ್ದಾಗ ಸಾಯಂಕಾಲದವರೆಗೆ ಬದುಕಿರುವುದು ನಿಶ್ಚಿತವಾಗಿರದ ಮನುಷ್ಯನಂತೆ ನನ್ನನ್ನು ಭಾವಿಸುತ್ತೇನೆ" ಎಂದು ಉತ್ತರಿಸಿದನು.

ಪ್ರಶ್ನಿಸಿದವನು "ಆದರೆ ಇದು ಎಲ್ಲರಿಗೂ ತಿಳಿದಿಲ್ಲವೇ?" ಎಂದನು.

ಉವ್ವೈಸ್, "ಅವರಿಗೆ ಖಂಡಿತವಾಗಿ ತಿಳಿದಿದೆ. ಆದರೆ ಅವರಲ್ಲಿ ಎಲ್ಲರೂ ಹಾಗೆ ಭಾವಿಸಿಲ್ಲ" ಎಂದನು.

'ವೈನ್' ಪದದ ಪ್ರಯೋಗ ಮಾಡಿದ ಮಾತ್ರಕ್ಕೆ ಯಾರೂ ಕುಡಿದವರಾಗುವುದಿಲ್ಲ.



## ಹಕ್ಕಿಯ ಹಾಡು

*ದೇವರ ಬಗೆಗೆ ಪ್ರಶ್ನಿಸಲು ಶಿಷ್ಯರು ತುದಿಗಾಲಲ್ಲಿ ನಿಂತಿದ್ದರು.*

*ಗುರುವು "ದೇವರು ಅಜ್ಞಾತ್ಯ, ಅಜ್ಞೇಯ. ಅವನ ಬಗ್ಗೆ ಇರುವ ಪ್ರತಿಯೊಂದು ಹೇಳಿಕೆ ಮತ್ತು ನಿಮ್ಮ ಪ್ರಶ್ನೆಗಳಿಗೆ ನೀಡುವ ಪ್ರತಿಯೊಂದು ಉತ್ತರ, ಇವು ಸತ್ಯದ ವಿರೂಪಗಳಾಗಿವೆ" ಎಂದನು.*

*ಶಿಷ್ಯರು ದಿಗ್ಭ್ರಾಂತರಾದರು, "ಹಾಗಾದರೆ ನೀವು ಅವನ ಬಗ್ಗೆ ಏಕೆ ಮಾತನಾಡುವಿರಿ?"*

*"ಹಕ್ಕಿ ಏಕೆ ಹಾಡುತ್ತದೆ?" ಹೇಳಿದನು ಗುರು.*

ಅದಕ್ಕೆ ಹೇಳಲು ವಿಷಯವಿದೆ ಎಂದಲ್ಲ, ಅದರ ಹಾಡು ಇದೆ ಎಂಬುದಕ್ಕಾಗಿ.

ವಿದ್ವಾಂಸರ ಮಾತುಗಳು ಅರಿವಿಗಾಗಿ ಇರುತ್ತವೆ. ಗುರುವಿನ ಮಾತುಗಳು ಕೇವಲ ಅರಿವಿಗಾಗಿ ಅಲ್ಲ. ಮರಗಳು ಅಲುಗಾಡುವ ಶಬ್ದವನ್ನು, ನದಿಯ ಕಲರವವನ್ನು ಮತ್ತು ಹಕ್ಕಿಯ ಹಾಡನ್ನು ಆಲಿಸಿದಂತೆ ಅವುಗಳನ್ನು ಆಲಿಸಬೇಕು. ಎಲ್ಲ ಜ್ಞಾನವನ್ನು ಮೀರಿದ, ಹೃದಯದೊಳಗಿನ ಏನನ್ನೋ ಅವು ಜಾಗೃತಗೊಳಿಸುತ್ತವೆ.

## ಕೊಂಡಿ

ಒಮ್ಮೆ ಒಬ್ಬ ಸನ್ಯಾಸಿಗೆ ಇರುವೆಗಳ ಭಾಷೆಯಲ್ಲಿ ಮಾತನಾಡುವ ವರ ಲಭಿಸಿತು. ಅವನು ಪಂಡಿತನ ಹಾಗೆ ಕಾಣುತ್ತಿದ್ದ ಒಂದು ಇರುವೆಯನ್ನು ಸಮೀಪಿಸಿ, "ದೇವರು ಯಾರ ಹಾಗಿದ್ದಾನೆ? ಅವನು ಯಾವ ರೀತಿಯಲ್ಲಾದರೂ ಇರುವೆಯನ್ನು ಹೋಲುವನೇ?" ಎಂದು ಕೇಳಿದನು.

ಪಂಡಿತ ಇರುವೆಯು ಉತ್ತರಿಸಿತು, "ದೇವರೇ? ಖಂಡಿತವಾಗಿ ಇಲ್ಲ! ನೋಡಿ, ನಾವು ಇರುವೆಗಳು, ಒಂದೇ ಒಂದು ಕೊಂಡಿಯನ್ನು ಹೊಂದಿದ್ದೇವೆ. ಆದರೆ ದೇವರು, ಅವನಿಗೆ ಎರಡು ಕೊಂಡಿಗಳಿವೆ" ಎಂದಿತು.

ಅನಂತರದ ಬರಹದಲ್ಲಿ ಸೂಚಿಸಲಾಗಿದೆ :

ಸ್ವರ್ಗವು ಹೇಗಿದೆಯೆಂದು ಕೇಳಿದಾಗ, ಪಂಡಿತ ಇರುವೆಯು ಗಾಂಭೀರ್ಯದಿಂದ ಹೇಳಿತು, "ಅಲ್ಲಿ ನಾವು ಅವನಂತೆಯೇ ಇರುವೆವು, ಎರಡು ಕೊಂಡಿಗಳನ್ನು ಹೊಂದಿ. ಆದರೆ ಕೊಂಡಿಗಳು ಸ್ವಲ್ಪ ಚಿಕ್ಕವು."

ಸ್ವರ್ಗಸ್ಥ ಇರುವೆಯ ಶರೀರದಲ್ಲಿ ಎರಡನೆಯ ಕೊಂಡಿಯು ಎಲ್ಲಿರುವುದು ಎಂಬ ಬಗ್ಗೆ ಧಾರ್ಮಿಕ ವಿಚಾರಧಾರೆಯ ಮತಗಳಲ್ಲಿ ಕಹಿ ವಾಗ್ವಾದವು ವ್ಯಾಪಿಸಿದೆ.

# ಆನೆ ಮತ್ತು ಇಲಿ

ಆನೆಯು ಕಾಡಿನ ಕೊಳದಲ್ಲಿ ಜಲಕ್ರೀಡೆಯಾಡುತ್ತಿತ್ತು. ಅಲ್ಲಿಗೆ ಬಂದ ಇಲಿಯು ಅದನ್ನು ಹೊರ ಬರಲು ಒತ್ತಾಯಿಸಿತು.

"ನಾ ಬರುವುದಿಲ್ಲ" ಎಂದಿತು ಆನೆ.

"ಈ ನಿಮಿಷವೇ ನೀನು ಹೊರಬರಬೇಕೆಂದು ನಾನು ಒತ್ತಾಯಿಸುತ್ತೇನೆ" ಎಂದಿತು ಇಲಿ.

"ಏಕೆ?"

"ನೀನು ಕೊಳದಿಂದ ಹೊರ ಬಂದ ಮೇಲೆಯೇ ನಿನಗೆ ಹೇಳುವೆನು"

"ಹಾಗಾದರೆ ನಾನು ಬರುವುದೇ ಇಲ್ಲ"

ಕೊನೆಗೂ ಆನೆ ಅಡ್ಡಾದಿಡ್ಡಿಯಾಗಿ ನಡೆಯುತ್ತಾ ಕೊಳದಿಂದ ಹೊರಬಂದು ಇಲಿಯ ಎದುರು ನಿಂತು ಕೇಳಿತು, "ಈಗ ಹೇಳು, ನಾನು ಕೊಳದಿಂದ ಹೊರ ಬರಲು ಏಕೆ ಬಯಸುತ್ತಿದ್ದೆ?"

"ನೀನು ನನ್ನ ಈಜುಡುಗೆಯನ್ನು ಧರಿಸಿರುವೆಯೇನೋ ಎಂದು ಪರೀಕ್ಷಿಸಲು" ಎಂದಿತು ಇಲಿ.

ದೇವರ ಬಗೆಗಿನ ನಮ್ಮ ಕಲ್ಪನೆಗಳಿಗೆ ಅವನು ಹೊಂದಿಕೊಳ್ಳುವುದಕ್ಕಿಂತ ಆನೆಯು ಇಲಿಯ ಉಡುಪಿಗೆ ಹೊಂದಿಕೊಳ್ಳುವುದು ಸುಲಭ.



## ರಾಜ ಗಾಂಭೀರ್ಯದ ಪಾರಿವಾಳ

ನಸ್ರುದ್ದೀನನು ರಾಜನ ಪ್ರಧಾನ ಮಂತ್ರಿಯಾದನು. ಒಮ್ಮೆ ಅವನು ಅರಮನೆಯಲ್ಲಿ ಅಡ್ಡಾಡುವಾಗ ಒಂದು ರಾಜ ಗಿಡುಗವನ್ನು ಕಂಡನು.

ಇಂತಹ ಪಾರಿವಾಳವನ್ನು ನಸ್ರುದ್ದೀನನು ಹಿಂದೆಂದೂ ನೋಡಿರಲಿಲ್ಲ! ಆದ್ದರಿಂದ ಅವನು ಕತ್ತರಿಯನ್ನು ತೆಗೆದುಕೊಂಡು ಅದರ ಮೊನೆಯುಗುರುಗಳನ್ನು, ರೆಕ್ಕೆಗಳನ್ನು ಮತ್ತು ಕೊಕ್ಕನ್ನು ಹದವಾಗಿ ಕತ್ತರಿಸಿದನು.

"ಈಗ ನೀನು ಶಿಷ್ಟ ಪಕ್ಷಿಯಂತೆ ಕಾಣುತ್ತೀಯೆ. ನಿನ್ನ ಪಾಲಕನು ಖಂಡಿತವಾಗಿ ನಿನ್ನನ್ನು ಕಡೆಗಣಿಸಿದ್ದಾನೆ" ಎಂದು ಆತನು ನುಡಿದನು.

ನೀನು ವಿಭಿನ್ನ. ಆದ್ದರಿಂದಲೇ ನಿನ್ನಲ್ಲೇನೋ ತಪ್ಪಿದೆ !



## ಕೋತಿಯ ಮತ್ಸ್ಯಮೋಕ್ಷ

*ನೀರಿನಿಂದ ಮೀನನ್ನು ಮೇಲೆತ್ತಿ ಮರದ ಮೇಲಿಡುತ್ತಿದ್ದ ಕೋತಿಯನ್ನು ಕಂಡ ನಾನು, "ನೀನು ಇದೇನು ಮಾಡುತ್ತಿರುವೆ?" ಎಂದೆ.*

*"ನಾನು ಅದನ್ನು ಮುಳುಗದಂತೆ ರಕ್ಷಿಸುತ್ತಿದ್ದೇನೆ" ಎಂಬುದು ಉತ್ತರವಾಗಿತ್ತು.*

ಗರುಡನಿಗೆ ದೃಷ್ಟಿ ಕೊಡುವ ಸೂರ್ಯನು ಗೂಬೆಯನ್ನು ಕುರುಡಾಗಿಸುತ್ತಾನೆ.


# ನದಿಯಲ್ಲಿ ಉಪ್ಪು ಮತ್ತು ಹತ್ತಿ

ನಸ್ರುದ್ದೀನನು ಸಂತೆಗೆ ಉಪ್ಪಿನ ಮೂಟೆಯನ್ನು ತೆಗೆದುಕೊಂಡು ಹೋಗುತ್ತಿದ್ದನು. ಅವನ ಕತ್ತೆಯು ನದಿಯ ನೀರಿನುದ್ದಕ್ಕೂ ಅಡ್ಡಾಡಿತು. ಅದರಿಂದ ಉಪ್ಪು ಕರಗಿತು. ಅದು ಆಚೆಯ ದಡವನ್ನು ತಲುಪಿದಾಗ ತನ್ನ ಹೊರೆಯು ಹಗುರಾಯಿತೆಂದು ಅತಿ ಸಂತೋಷದಿಂದ ವೃತ್ತಾಕಾರವಾಗಿ ಸುತ್ತುತ್ತಾ ಓಡಿತು. ಆದರೆ ನಸ್ರುದ್ದೀನನಿಗೆ ಕೋಪ ಬಂದಿತು.

ಮುಂದಿನ ಸಂತೆಯ ದಿನ ಅವನು ಚುಕ್ಕೆಗಳಲ್ಲಿ ಹತ್ತಿಯನ್ನು ತುಂಬಿದನು. ನದಿಯ ನೀರಿನಲ್ಲಿ ಹತ್ತಿಯು ನೆನೆದಾಗ ಅದರ ತೂಕ ಹೆಚ್ಚಾಯಿತು. ಆಗ ಕತ್ತೆಗೆ ಇನ್ನೇನು ಮುಳುಗಿಹೋದಂತೆಯೇ ಆಯಿತು.

"ಹಾಗೆ ಆಗಬೇಕು." "ಪ್ರತಿ ಬಾರಿ ನೀನು ನೀರಿನ ಒಳಹೊಕ್ಕಾಗ ಹೊಸದನ್ನು ಗಳಿಸುತ್ತೀಯೆ ಎಂದು ಯೋಚಿಸಲು ನಿನಗಿದು ಪಾಠವಾಯಿತು" ಎಂದನು ಹಿರಿಹಿಗ್ಗಿದ ನಸ್ರುದ್ದೀನ್.

ಇಬ್ಬರು ವ್ಯಕ್ತಿಗಳು ಧರ್ಮವಲಯದ ಒಳಹೊಕ್ಕರು. ಒಬ್ಬನು ಬದುಕಿ ಬಂದನು, ಮತ್ತೊಬ್ಬನು ಮುಳುಗಿದನು.



## ಕತ್ತೆಗಾಗಿ ಹುಡುಕಾಟ


*ಮುಲ್ಲಾ ನಸ್ರುದ್ದೀನನು ತನ್ನ ಕತ್ತೆಯ ಮೇಲೇರಿ ಹಳ್ಳಿಯ ರಸ್ತೆಗಳಲ್ಲಿ ಗಿರ್ರನೆ ತಿರುಗುತ್ತಿರುವುದನ್ನು ಕಂಡ ಪ್ರತಿಯೊಬ್ಬರೂ ಅಪಾಯದ ಸೂಚನೆಯಿಂದ ಗಾಬರಿಯಾದರು.*

*"ಮುಲ್ಲಾ, ನೀನೆಲ್ಲಿಗೆ ಹೊರಟೆ?" ಎಂದವರು ಕೇಳಿದರು.*

*"ನಾನು ನನ್ನ ಕತ್ತೆಯನ್ನು ಹುಡುಕುತ್ತಿದ್ದೇನೆ" ಎಂದು ಹೇಳುತ್ತಾ ಮುಲ್ಲಾನು ಸುಯ್‌ಗುಟ್ಟುತ್ತಾ ಸಾಗಿದನು.*

ಝೆನ್ ಗುರು ರಿನ್ಜಾಯಿಯು ಒಮ್ಮೆ ತನ್ನ ದೇಹವನ್ನು ಹುಡುಕುತ್ತಿದ್ದುದು ಕಂಡು ಬಂದಿತು. ಅದು ಅವನ ಅಜ್ಞಾನಿ ಶಿಷ್ಯರಿಗೆ ಅತೀವ ಮನೋರಂಜನೆಯನ್ನು ಒದಗಿಸಿತು.

ತಾವು ದೇವರನ್ನು ಹುಡುಕುತ್ತಿರುವೆವೆಂದು ಹೇಳುವ ಜನರನ್ನೂ ಒಮ್ಮೊಮ್ಮೆ ಭೇಟಿ ಮಾಡಬೇಕಾಗುತ್ತದೆ.





## ನೈಜ ಅಧ್ಯಾತ್ಮಿಕತೆ

ಶಿಷ್ಯರು ಗುರುವನ್ನು ಕೇಳಿದರು, "ಅಧ್ಯಾತ್ಮಿಕತೆ ಎಂದರೇನು?"

ಅವನು ಹೇಳಿದನು, "ಯಾವುದು ವ್ಯಕ್ತಿಯ ಅಂತರ್ಯವನ್ನು ಮಾರ್ಪಡಿಸುವುದರಲ್ಲಿ ಯಶಸ್ವಿಯಾಗುವುದೋ, ಅದು ಅಧ್ಯಾತ್ಮಿಕತೆ."

'ಆದರೆ ನಾನು, ಗುರುಗಳು ಹಸ್ತಾಂತರಿಸಿದ ಸಾಂಪ್ರದಾಯಿಕ ಪದ್ಧತಿಗಳನ್ನು ಅನುಸರಿಸಿದರೆ, ಅದು ಅಧ್ಯಾತ್ಮಿಕತೆಯಾಗುವುದಿಲ್ಲವೇ?'

'ನಿನ್ನ ಅಂತರ್ಯವನ್ನು ಮಾರ್ಪಡಿಸದಿದ್ದರೆ, ಅದು ಅಧ್ಯಾತ್ಮಿಕತೆಯಲ್ಲ. ಹೊದಿಕೆಯು ನಿನ್ನನ್ನು ಬೆಚ್ಚಗಿರಿಸದಿದ್ದಲ್ಲಿ, ಅದು ಹೊದಿಕೆ ಆಗಲಾರದು.'

'ಹಾಗಾದರೆ ಅಧ್ಯಾತ್ಮಿಕತೆಯು ಬದಲಾಗುವುದೇ?'

'ಮನುಷ್ಯರು ಬದಲಾಗುತ್ತಾರೆ ಮತ್ತು ಅವಶ್ಯಕತೆಗಳೂ ಬದಲಾಗುತ್ತವೆ. ಆದ್ದರಿಂದ ಒಮ್ಮೆ ಅಧ್ಯಾತ್ಮಿಕತೆಯಾಗಿದ್ದುದು ಯಾವಾಗಲೂ ಅಧ್ಯಾತ್ಮಿಕತೆಯಾಗಿರುವುದಿಲ್ಲ. ಸಾಮಾನ್ಯವಾಗಿ ಅಧ್ಯಾತ್ಮಿಕತೆಯ ಹೆಸರಿನಲ್ಲಿ ಪ್ರಚಲಿತವಾಗಿರುವುದು ಹಳೆಯ ಪದ್ಧತಿಗಳ ದಾಖಲೆ ಮಾತ್ರ.'

ಅಂಗಿಗೆ ಸರಿಹೊಂದಿಸಲು ಮನುಷ್ಯನನ್ನು ಕತ್ತರಿಸಬೇಡಿ.